# ವಿಭಿನ್ನ ವಿನಾಯಕ

ಇಳಕಲ್‌ನ ವಿಜಯ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾದ ಡಾ.ಬಸವರಾಜ ಗವಿಮಠ ಅವರ ಮಾರ್ಗದರ್ಶನದಲ್ಲಿ ಕಲಾ ವಿದ್ಯಾರ್ಥಿಗಳು ನಿರುಪಯುಕ್ತ ವಸ್ತುವಾದ ಟೇಲರ್ ಬಳಸಿ ಬಿಸಾಕುವ ದಾರದ ಕೊಳವೆಗಳನ್ನು ಸಂಗ್ರಹಿಸಿ ಏಳು ಅಡಿ ಎತ್ತರದ ವಿಭಿನ್ನವಾದ ವಿನಾಯಕನನ್ನು ಪ್ರತಿಷ್ಠಾಪಿಸಿದ್ದರು. ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಈ ತರಹದ ಗಜಾನನ ಮೂರ್ತಿಗಳನ್ನು ಕೂಡಿಸುವುದು ಮೆಚ್ಚುವಂತಹದು.

**-ಈರಣ್ಣ ಬೆಂಗಾಲಿ, ರಾಯಚೂರು**





# ತೆಂಗಿನ ಗರಿಯ ಆಟಿಕೆಗಳು!

ಇಂದಿನ ಮಕ್ಕಳು ನೋಡಿಯೇ ಇಲ್ಲದ ತೆಂಗಿನ ಗರಿಗಳ ಆಟಿಕೆ ತಯಾರಿಸುವ ಸ್ಪರ್ಧೆಯೊಂದನ್ನು ಉಡುಪಿಯ 'ತುಳುಕೂಟ' ಆಯೋಜಿಸಿತ್ತು. ಹೆಚ್ಚಾಗಿ ಹಳ್ಳಿಗಳಲ್ಲಿ ಮನೆಯಲ್ಲೇ ತಯಾರಿಸಿ ಆಟವಾಡುತ್ತಿದ್ದ ಈ ಆಟಿಕೆಗಳು ಟಿವಿ ಇಲ್ಲದ ದಿನಗಳನ್ನು ನೆನಪಿಸಿತು. ಖರ್ಚಿಲ್ಲದೆ ತಯಾರಿಸಬಹುದಾದ ಈ ಆಟಿಕೆಗಳಲ್ಲಿ ಆಡುವ ಮಜಾವೇ ಬೇರೆ ! ಸ್ಪರ್ಧೆಯಲ್ಲಿ ಕೆಲವು ಮಕ್ಕಳಾದರೂ ಗಿರಿಗಿಟ್, ಊದುವ ಪೀಪಿ, ಕನ್ನಡಕ, ಹಾವು, ವಾಚು, ಚಾಪೆ ಮುಂತಾದವುಗಳನ್ನು ರಚಿಸಿ ಗಮನ ಸೆಳೆದರು

**-ಜೀವನ್ ಶೆಟ್ಟಿ ಎಂ. ಉಡುಪಿ**

# ಖಜುರಾಹೋದ ಬೃಹತ್ ವರಾಹಮೂರ್ತಿ!

ಹಿರಣ್ಯಾಕ್ಷ ದೈತ್ಯನು ಕದ್ದು ರಸಾತಳದಲ್ಲಿ ಬಚ್ಚಿಟ್ಟಿದ್ದ ಭೂಮಿಯನ್ನು ಎತ್ತಿ ಉದ್ಧರಿಸಲು ಮಹಾವಿಷ್ಣುವು ವರಾಹ ಅಥವಾ ಕಾಡುಹಂದಿಯ ಅವತಾರ ತಾಳಿದ ಕಥೆ ಗೊತ್ತಲ್ಲ? ಈ ವರಾಹಮೂರ್ತಿಯ ದೇವಾಲಯಗಳು ನಮ್ಮ ದೇಶದಲ್ಲಿ ಅಲ್ಲಲ್ಲಿ ಕೆಲವಿವೆ. ಇದು ಮಧ್ಯಪ್ರದೇಶದ ಖಜುರಾಹೋ ದೇವಾಲಯ ಸಂಕೀರ್ಣದ ವರಾಹ ದೇವಾಲಯ.

ಅದ್ಭುತ ವಾಸ್ತುಶಿಲ್ಪಕ್ಕೂ, ರತಿಶಿಲ್ಪಗಳ ಸೌಂದರ್ಯಕ್ಕೂ ಹೆಸರಾಗಿರುವ ಖಜುರಾಹೋ ದೇವಾಲಯಗಳಲ್ಲಿ ಇದು ವಿಭಿನ್ನವಾಗಿದೆ. ಪಶ್ಚಿಮ ಗುಂಪಿನ ದೇವಾಲಯಗಳಲ್ಲಿ ಎರಡನೆಯದಾದ ಇದು ಚಿಕ್ಕದಾಗಿದ್ದು, ಸರಳ ವಿನ್ಯಾಸದಿಂದ ಕೂಡಿದೆ ಹಾಗೂ ರತಿಶಿಲ್ಪಗಳನ್ನು ಹೊಂದಿಲ್ಲ. ಆದರೆ ಒಳಗಿನ ಬೃಹತ್ ವರಾಹ ಮೂರ್ತಿ ನಮ್ಮನ್ನು ನಿಬ್ಬೆರಗಾಗಿಸುತ್ತದೆ! ಸುಮಾರು 2.5 ಮೀಟರ್ ಉದ್ದ ಹಾಗೂ 1.5 ಮೀಟರ್ ಉದ್ದವಿರುವ ಮೂರ್ತಿಯ ಮೈಪೂರಾ ಎಲ್ಲ ದೇವ–ದೇವಿಯರ ಚಿತ್ರಗಳನ್ನು ಕೆತ್ತಲಾಗಿದೆ! ಮರಳುಕಲ್ಲಿನಿಂದ ಮಾಡಿದ್ದರೂ ಇದು ಹೊಳಪಿನಿಂದ ಕೂಡಿದೆ! ಪಾದಗಳ ಬಳಿ ಆದಿಶೇಷನಾಗನ ಹಾಗೂ ಈಗ ಮುರಿದು ಹೋಗಿರುವ ಭೂದೇವಿಯ ಪಾದಗಳ ಕೆತ್ತನೆಗಳಿವೆ.

**ಚಿತ್ರ-ಬರಹ: ಡಾ. ಬಿ.ಆರ್. ಸುಹಾಸ್, ಬೆಂಗಳೂರು**

